# ಉದರ ದೈವಕ್ಕೆ ಜಗದೊಳೆದುರು ದೈವವದೆಲ್ಲಿ?



ಎಚ್.ಎಸ್. ನವೀನಕುಮಾರ್

‘ಎಲ್ಲಾರು ಮಾಡುವುದು ಹೊಟ್ಟೆಗಾಗಿ...’ ಎಂದು ದಾಸವರೇಣ್ಯ ಪುರಂದರದಾಸರು ಹಾಡಿದಂತೆ, ನಮ್ಮೆಲ್ಲರ ಬಹುತೇಕ ಕೃತಿ–ಕರ್ತೃಗಳು ಉದರ ಕೇಂದ್ರೀಕೃತವೇ. ದೇಹದಲ್ಲಿಯೂ ಉದರದ ಉಪಸ್ಥಿತಿ ಕೇಂದ್ರ ಭಾಗದಲ್ಲಿಯೇ. ನಮ್ಮೆಲ್ಲರ ನೆಚ್ಚಿನ ದೈವ, ಆದಿ ಪೂಜಿತ, ವಿನಾಯಕನ ಪ್ರಮುಖ ಆಕರ್ಷಣೆ ಅವನ ಹೊಟ್ಟೆಯೇ. ಹೊಟ್ಟೆಯ ನೇರ ಅವಶ್ಯಕತೆಯ ಪೂರೈಕೆಗೆ ಪ್ರಪಂಚದ ಅತಿದೊಡ್ಡ ಉದ್ಯಮಗಳಲ್ಲಿ ಒಂದಾದ ಹೋಟೆಲ್ ಉದ್ಯಮವೇ ಇದೆ. ‘ರೋಟಿ, ಕಪಡಾ, ಮಕಾನ್’ ಎಂಬ ಮೂಲಭೂತ ಅವಶ್ಯಕತೆಗಳಲ್ಲಿ ಮೊದಲ ಆದ್ಯತೆ ಉದರದ್ದೇ ಆಗಿದೆ. ಯಾವುದೇ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ, ‘ಊಟದ ಮೆನು’ ಚೆನ್ನಾಗಿರಬೇಕೆಂಬುದು ಅನುಭವಿ ಆಯೋಜಕರ ಅಭಿಪ್ರಾಯ. ಅದಕ್ಕೇ ಡಿ.ವಿ. ಗುಂಡಪ್ಪನವರು–

‘ಉದರದ ದೈವಕ್ಕೆ ಜಗದೊಳೆದುರು
ದೈವವದೆಲ್ಲಿ?
ಮೊದಲದರ ಪೂಜೆ, ಮಿಕ್ಕೆಲ್ಲವದರಿಂದ,
ಮದಿಸುವುದಾದರಿಸೆ, ಕುದಿವುದು ನಿರಾಕರಿಸೆ
ಹದದೊಳಿರಿಸುವುದೆಂತೋ ಮಂಕುತಿಮ್ಮ’

ಎಂದು ಜಗತ್ತಿನಲ್ಲಿ ಸಾಟಿ ಇರದ ದೈವವೆಂದರೆ ಹೊಟ್ಟೆಯೇ ಎಂದು ಹೇಳುತ್ತಾರೆ. ಹೀಗಾಗಿ ಅಗ್ರಪೂಜೆಗೆ ಭಾಜನವಾಗಬೇಕಾದ್ದು ಹೊಟ್ಟೆಯೇ. ಉದರಕ್ಕೆ ಉಪಚಾರ ಹೆಚ್ಚಾದರೆ, ಮನಸ್ಸಿನ ಮದ ಹೆಚ್ಚುತ್ತದೆ, ಏನೂ ಕೊಡದೇ ನಿರಾಕರಿಸಿದರೆ ಕುದಿತಕ್ಕೆಡೆ ಮಾಡಿಕೊಡುತ್ತದೆ. ಇದರ ಹದವನ್ನು ಸಾಧಿಸುವುದೇ ಬದುಕಿನ ಒಂದು ದೊಡ್ಡ ಪ್ರಶ್ನೆ ಎಂದು ಉದರದ ತುಡಿತಕ್ಕೆ ಇರುವ ಜೀವನ ದರ್ಶನದ ಕೊಂಡಿಯನ್ನು, ಸ್ವತಃ ಭೋಜನ ಪ್ರಿಯರಾದ ಡಿ.ವಿ. ಜಿ.ಯವರು ಅರ್ಥಪೂರ್ಣವಾಗಿ, ತಿಳಿಹಾಸ್ಯದೊಡನೆ ನಿವೇದಿಸುತ್ತಾರೆ.

‘ಉದರ ನಿಮಿತ್ತಂ ಬಹುಕೃತ ವೇಷಂ’ ಎಂಬ ಮಾತು ನನಗೆ ಇನ್ನೊಂದು ಅರ್ಥದಲ್ಲಿ ಹೊಳೆಯಲಾರಂಭಿಸಿದ್ದು, ಮುಂಜಾವಿನ ಚಳಿಯಲ್ಲಿ ಜಾಗಿಂಗ್ ಎಂಬ ಅನಿವಾರ್ಯ ಕಾರ್ಯಕ್ರಮವನ್ನು ಒಲ್ಲದ ಮನಸ್ಸಿಂದ ಮಾಡುವಾಗ! ಸರಿಯಾಗಿ ಬೆಳಕು ಮೂಡುವ ಮೊದಲೇ ವಿವಿಧ ರೀತಿಯ ವೇಷಭೂಷಣಗಳೊಡನೆ, ಮುಂಜಾವಿನ